## ಫೋನ್ ನಂಬರ್ ಪ್ಲೀಸ್



ಪರಮೇಶಿ ಒಂದು ಗಂಟೆಯಿಂದ ತಲೆ ಎತ್ತದೇ ಪರೀಕ್ಷೆ ಬರೆಯುತ್ತಿದ್ದ. ಅವನ ಹಿಂದೆ ಕುಳಿತ ಹುಡುಗಿ ನಿಧಾನಕ್ಕೆ ಪರಮೇಶಿಯನ್ನು ಕರೆದಳು. ಹೆಣ್ಣು ದನಿಯನ್ನು ಕೇಳಿದ ಆತ ಆನಂದತುಂದಿಲನಾಗಿ ಹಿಂತಿರುಗಿ ನೋಡಿದ. 'ಐದನೇ ಪ್ರಶ್ನೆಯ ಉತ್ತರ ಹೇಳಿ ಪ್ಲೀಸ್' ಅಂದಳು. 'ಮೊದಲು ನಿಮ್ಮ ಫೋನ್ ನಂಬರ್ ಕೊಡಿ ಪ್ಲೀಸ್' ಅಂದ ಪರಮೇಶಿ. ಹುಡುಗಿ ಅವನನ್ನು ಮತ್ತೆ ಮಾತನಾಡಿಸಲಿಲ್ಲ!

**ಸಂಜೋತಾ ಶಂಕರ್**

## ಇನ್ನೊಮ್ಮೆ ಹೇಳಿ ಬಿಡು

ಗಂಗಾರಾಮ ತನ್ನ ಫ್ಯಾಮಿಲಿ ಡಾಕ್ಟರ್‌ಗೆ ಫೋನ್ ಮಾಡಿ ಹೇಳಿದ– 'ನಮಸ್ಕಾರ ಡಾಕ್ಟ್ರೆ, ಕೊರೊನಾ ಬರಲಾರದ್ಹಂಗ ತಡೆಯೋದಕ್ಕ ಒಂದಷ್ಟು ದಾರಿ ಅನುಸರಿಸ್ಲಿಕತ್ತೇನರಿ. ದಿನಾ ಯೋಗ, ವಾಕಿಂಗ್, ನಿಂಬೆರಸದ ನೀರು, ಹಾಲಿನ ಜೊತೆ ಅರಿಸಿನ, ಮೊಳಕೆ ಕಾಳು, ಹಸಿ ಬೆಳ್ಳುಳ್ಳಿ–ಶುಂಠಿ, ಅಂಜೂರ–ಖರ್ಜೂರ, ಹರ್ಬಲ್ ಕಾಢಾ, ಲವಂಗ, ಕರಿ ಮೆಣಸು, ಬಿಸಿ ನೀರಿನೊಳಗ ಅರಿಸಿನ–ಉಪ್ಪು ಹಾಕ್ಕೊಂಡು ಗುಳುಗುಳು ಮಾಡೂದು. ಅಮೃತಬಳ್ಳಿ ಮತ್ತ ಬೇವಿನ ಗುಳಿಗೆ ತಗೋತಿನಿ. ಇಷ್ಟೆಲ್ಲಾ ಅಲ್ದ ದಿನ ಒಗೆದ ಬಟ್ಟೆ ಉಪಯೋಗಿಸ್ತೀನಿ. ಕಿರಾಣಿ ಹೋಂ ಡೆಲಿವರಿ ತರಸ್ತೀನಿ. ತಂದ ಕಿರಾಣಿನ ಒಂದು ದಿನ ಬಿಸಲಾಗ ಇಡ್ತೇನ್ರಪಾ... ಮತ್ ಕೇಳ್ರಿ... ತಿಥಿ–ನಕ್ಷತ್ರ ನೋಡ್ಕಂಡು ತಾಟು, ಗಂಟೆ, ಚಪ್ಪಾಳೆ ಎಲ್ಲಾ ಬಾರಸತೇನ್ರಿ... ಇದನ್ನೆಲ್ಲಾ ಬಿಟ್ಟು ಮತ್ತೇನರೆ ಗುಳಿಗಿ–ಪಳಗಿ ತಗೋಳುದು ಐತೇನರಿ?' ಗಂಗಾರಾಮನ ಮಾತು ಕೇಳಿ ಸುಸ್ತು ಹೊಡೆದ ಡಾಕ್ಟರು, 'ಸಾಕು ಮಾಡೋ ಮಾರಾಯ. ನಿನ್ನ ಜೀವ ತೆಗೆಯೋದಕ್ಕ ಭಗವಂತ ಮತ್ತೊಮ್ಮೆ ನರಸಿಂಹನ ಅವತಾರ ತಾಳಬೇಕಾಗ್ತದ... ಅಂದಂಗ ನೀ ಇಷ್ಟೊತ್ತನ ಹೇಳಿದಿ ಅಲ್ಲ, ಆ ಲಿಸ್ಟ್ ಇನ್ನೊಮ್ಮಿ ಹೇಳಿಬಿಡಪ... ಸ್ವಲ್ಪ ಬರಕೋತಿನಿ' ಅಂದರು.

**ಚಿದಾನಂದ ಎಂ.**




ಕಲೆ: ಗಣೇಶ ಆಚಾರ್ಯ